## ವಿವಿಧ ಪ್ರಕಾರದ ವಿದ್ಯುತ್ ದೀಪಗಳ ಬಳಕೆ ಪ್ರಮಾಣದ ಹೋಲಿಕೆ

| ವಿವಿಧ ಪ್ರಕಾರದ ವಿದ್ಯುತ್ ದೀಪಗಳು | Incandescent  60 Watts/hour | Fluorescent (TB)  36 Watts/hour | CFL  15 Watts/hour | LED  9 Watts/hour |
|---|---|---|---|---|
| ಲುಮೆನ್ / ವ್ಯಾಟ್ / ಗಂಟೆ | 11.67 | 73.61 | 48.00 | 100.00 |
| ಒಂದು ವರ್ಷದಲ್ಲಿ ಬಳಕೆಯಾಗುವ ವಿದ್ಯುತ್ ಯುನಿಟ್‌ಗಳು (ದಿನಕ್ಕೆ 6 ಗಂಟೆಯಂತೆ) | 131.40 | 78.84 | 32.85 | 19.71 |
| ಆಯಸ್ಸು (ಗಂಟೆಗಳಲ್ಲಿ) | 1200 | 15000 | 10000 | 25000 |
| ಪ್ರತಿ ಬಲ್ಬಿನ ಖರೀದಿ ವೆಚ್ಚ (ರೂಪಾಯಿ) | 12 | 85 | 200 | 70 |
| 25000 ಗಂಟೆಗೆ ಬೇಕಾದ ಬಲ್ಬಗಳ ಸಂಖ್ಯೆ | 21 | 2 | 3 | 1 |
| ಒಂದು ವರ್ಷದ ವಿದ್ಯುತ್ ಬಳಕೆಯ ವೆಚ್ಚ (ಸರಾಸರಿ ₹ 5.00 / ಯುನಿಟ್) | 657.00 | 394.20 | 164.25 | 98.55 |

**"ಎಲ್‌ಇಡಿ ದೀಪ ಬಳಸಿ ವಿದ್ಯುತ್ ಬಿಲ್ ಕಡಿತಗೊಳಿಸಿ"**

**ಅದಾಲತ್ ಹಾಗೂ ಗ್ರಾಹಕರ ಸಂವಾದ ಸಭೆ**

**ಪ್ರತಿ ತಿಂಗಳ ಮೂರನೇ ಶನಿವಾರದಂದು ಆಯಾ ಕಾರ್ಯ ಮತ್ತು ಪಾಲನಾ ಉಪವಿಭಾಗ ಕಚೇರಿಯಲ್ಲಿ ಆಯೋಜಿಸಲಾಗಿದೆ**

ಹೆಚ್ಚಿನ ಮಾಹಿತಿಗಾಗಿ 24X7 ಸಹಾಯವಾಣಿ ಸಂಖ್ಯೆ 1912 ಗೆ ಕರೆ ಮಾಡಿ, ಇಮೇಲ್ eera.hescom@gmail.com

1912 ಕಾರ್ಯನಿರತವಾಗಿದ್ದಲ್ಲಿ ಗ್ರಾಹಕರು ದೂರನ್ನು ದಾಖಲಿಸಲು ಸಂಬಂಧಿಸಿದ ಶಾಖಾಧಿಕಾರಿ/ ಸಹಾಯಕ ಕಾರ್ಯ ನಿರ್ವಾಹಕ ಇಂಜನಿಯರ್ (ವಿ), ಕಾರ್ಯ ಮತ್ತು ಪಾಲನೆ ಉಪವಿಭಾಗ ಇವರನ್ನು ಸಂಪರ್ಕಿಸಲು ಕೋರಲಾಗಿದೆ.

# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅರ್ಪಿಸುವ

## ವಿದ್ಯುಚ್ಛಕ್ತಿ ಉಳಿತಾಯಕ್ಕೆ ಮಾರ್ಗದರ್ಶನಗಳ ಕೈಪಿಡಿ

ಡಿ.ಎಸ್.ಎಮ್

ಹೆಚ್ಚು ಸ್ಟಾರ್ ಹೆಚ್ಚು ಉಳಿತಾಯ

ಬಿಇಇ 5 ಸ್ಟಾರ್‌ಗಳುಳ್ಳ ವಿದ್ಯುತ್ ಉಪಕರಣಗಳನ್ನು ಬಳಸಿ

24/7 ಸಹಾಯವಾಣಿ 1912





ಕಂಪನಿ ಕಛೇರಿ, ಪಿ. ಬಿ. ರಸ್ತೆ, ನವನಗರ, ಹುಬ್ಬಳ್ಳಿ- 580025

ಇಮೇಲ್ : eedsmandrnd.hescom@gmail.com

ವೆಬ್‌ಸೈಟ್ : www.hescom.co.in

### ವಿದ್ಯುತ್ ಗ್ರಾಹಕರಿಗೆ – ಸುರಕ್ಷತೆಯ ಸಲಹೆ :

1. ಯಾವಾಗಲೂ ಐ. ಎಸ್. ಐ. ಅಂಗೀಕೃತ ಗುಣಮಟ್ಟದ ಸಾಮಗ್ರಿಗಳನ್ನೇ ಉಪಯೋಗಿಸಿ.
2. ಸಡಿಲ ಸಂಪರ್ಕ ಮತ್ತು ಅದರಿಂದ ಉಂಟಾಗುವ ಶಾಖ ಮತ್ತು ಕರಗುವಿಕೆಯನ್ನು ತಡೆಯಲು ಪ್ಲಗ್ ಸಾಕೆಟ್ ಬಿಗಿಗೊಳಿಸಿ.
3. ಯಾವಾಗಲೂ 3 - ಪಿನ್ ಸಾಕೆಟ್ ಉಪಯೋಗಿಸಿ.
4. ವಿದ್ಯುತ್ ಸಂಪರ್ಕಗಳ ತೆರೆದ ಭಾಗಗಳನ್ನು ಇನ್ಸುಲೇಶನ್ ಟೇಪನಿಂದ ಸುತ್ತಬೇಕು.
5. ವಿದ್ಯುತ್ ಉಪಕರಣದ ಸಮೀಪ ಬೆಂಕಿ ಕಂಡರೆ, ಕೂಡಲೇ ವಿದ್ಯುತ್ ಸರಬರಾಜು ಸ್ವಿಚ್ ಆಫ್ ಮಾಡಿರಿ.
6. ವಿದ್ಯುತ್ ಮಾರ್ಗಗಳ ಕಡೆಗೆ ಬಾಲ್ಕನಿಗಳನ್ನು / ಕಿಟಕಿಗಳನ್ನು ನಿರ್ಮಿಸುವುದನ್ನು ತಪ್ಪಿಸಿ.
7. ಸಾರ್ವಜನಿಕರು ವಿದ್ಯುತ್ ಮಾರ್ಗಗಳ ಹತ್ತಿರ ಇರುವ ಮರದ ರೆಂಬೆಗಳನ್ನು ಕತ್ತರಿಸದೆ ಮಾಹಿತಿಯನ್ನು 1912 ಗೆ ಕರೆ ಮಾಡಿ ತಿಳಿಸಿರಿ.
8. ಒಡೆದು ಹೋಗಿರುವ ಸ್ವಿಚ್‌ಗಳು / ಸಾಕೆಟ್ ಅಥವಾ ಪ್ಲಗ್ ಉಪಯೋಗಿಸಬಾರದು.
9. ತೇವವಾದ ಕೈಗಳಿಂದ ವಿದ್ಯುತ್ ಉಪಕರಣ / ಸ್ವಿಚ್‌ಗಳನ್ನು ಮುಟ್ಟಬಾರದು.
10. ಮೇಲೆ ಹಾಕಲಾದ ವಿದ್ಯುತ್ ಮಾರ್ಗಗಳ ಕೆಳಭಾಗದಲ್ಲಿ ಉದ್ದನೆಯ ಲೋಹದ ಕೊಳವೆಗಳನ್ನು ತೆಗೆದುಕೊಂಡು ಸಾಗಿಸುವುದು ಅಪಾಯಕಾರಿ.
11. ಅರ್ಥಿಂಗ್ ವೈರ್‌ಗೆ ನೀರು ಸರಬರಾಜು ಕೊಳವೆಗಳ ಸಂಪರ್ಕ ಕಲ್ಪಿಸಕೂಡದು.

### ಯಾವುದೇ ವ್ಯಕ್ತಿಗೆ ವಿದ್ಯುತ್ ಸಂಪರ್ಕ ಉಂಟಾದಲ್ಲಿ :

1. ತಕ್ಷಣ ಆತನನ್ನು ಮುಟ್ಟಬಾರದು.
2. ಮುಖ್ಯ ವಿದ್ಯುತ್ ಸರಬರಾಜು ಸ್ವಿಚ್ ಆಫ್ ಮಾಡಬೇಕು.
3. ನಿಮಗೆ ವಿದ್ಯುತ್ ಸಂಪರ್ಕವಾಗದಂತೆ ರಕ್ಷಿಸಿಕೊಂಡು ವಿದ್ಯುತ್ ಸಂಪರ್ಕಕ್ಕೊಳಗಾದ ವ್ಯಕ್ತಿಯನ್ನು ದೂರ ಸರಿಸಿರಿ.
4. ಆತನಿಗೆ ಪ್ರಥಮ ಚಿಕಿತ್ಸೆ ನೀಡಿರಿ.
5. ವೈದ್ಯರನ್ನು ಕರೆಯಿಸಿ / ವೈದ್ಯರಲ್ಲಿಗೆ ಕರೆದೊಯ್ಯಿರಿ.

### ವಿನಂತಿ :

1. ಬಿಇಇಯಿಂದ ದೃಢೀಕೃತಗೊಂಡ 5 ಸ್ಟಾರ್ ರೇಟೆಡ್ ವಿದ್ಯುತ್ ಉಪಕರಣಗಳನ್ನು ಬಳಸುವುದರಿಂದ ವಿದ್ಯುತ್ ಬಿಲ್‌ನಲ್ಲಿ ಉಳಿತಾಯವಾಗುತ್ತದೆ ಹಾಗೂ ವಿದ್ಯುಚ್ಛಕ್ತಿಯೂ ಸಹ ಉಳಿತಾಯವಾಗುತ್ತದೆ. ಆದ್ದರಿಂದ ವಿದ್ಯುತ್ ಉಪಕರಣಗಳನ್ನು ಖರೀದಿಸುವಾಗ ಬಿಇಇ ಪ್ರಮಾಣಿತ 5 ಸ್ಟಾರ್ ರೇಟೆಡ್ ಉಪಕರಣಗಳನ್ನೇ ಖರೀದಿಸಿ ಉಪಯೋಗಿಸುವದು.
2. ಸಾರ್ವಜನಿಕ ಬೀದಿದೀಪಗಳಿಗೆ ಎಲ್ ಇ ಡಿ ದೀಪಗಳನ್ನು ಬಳಸುವುದು.
3. ಬುರುಡೆ ಬಲ್ಬ್ / ಟ್ಯೂಬ್ ಲೈಟ್ / ಸಿ.ಎಫ್.ಎಲ್. ಬಲ್ಬ್‌ಗಳ ಬದಲಾಗಿ ಎಲ್.ಇ.ಡಿ ಬಲ್ಬ್‌ಗಳನ್ನು ಬಳಸಿ. ಎಲ್.ಇ.ಡಿ ಬಲ್ಬ್‌ಗಳ ಬಳಕೆಯಿಂದ ನಿಮ್ಮ ವಿದ್ಯುತ್ ಬಿಲ್ ಕಡಿಮೆಯಾಗುತ್ತದೆ.



**ಹಸಿರು ಇಂಧನ, ದಕ್ಷ ಇಂಧನ ಬಳಕೆಯಲ್ಲಿ ಕೈ ಜೋಡಿಸಿ**

### ಹೊಸ ಸಂಪರ್ಕ ಪಡೆಯುವ ಬಳಕೆದಾರರ ಗಮನಕ್ಕೆ :

1. ಇಂಧನ ಇಲಾಖೆ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇಎನ್ 103 ವಿಎಸ್‌ಸಿ 2017, ಬೆಂಗಳೂರು, ದಿನಾಂಕ: 19-05-2017 ರಂತೆ ದಿನಾಂಕ 01-06-2017 ರಿಂದ ಜಾರಿಗೆ ಬರುವಂತೆ ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯಲು ನೊಂದಣಿಗೊಳ್ಳುವ, (ಗಂಗಾ ಕಲ್ಯಾಣ ಯೋಜನೆಯ ಕೊಳಬಾವಿಗಳೂ ಸೇರಿದಂತೆ) ಎಲ್ಲಾ ನೀರಾವರಿ ಪಂಪಸೆಟ್‌ಗಳಿಗೆ ಕಡ್ಡಾಯವಾಗಿ ಹೆಚ್ಚಿನ ಕಾರ್ಯಕ್ಷಮತೆಯುಳ್ಳ (Energy Efficient) 4 ಅಥವಾ 5 ಸ್ಟಾರ್ ರೇಟೆಡ್ ಪಂಪ್‌ಗಳನ್ನೇ ಅಳವಡಿಸುವುದು ಮತ್ತು ವಿದ್ಯುತ್ ಸಂಪರ್ಕ ಪಡೆಯುವಾಗ ಅರ್ಜಿದಾರರು ಈ ಬಗ್ಗೆ ಧೃಢೀಕರಣ ಪತ್ರವನ್ನು ಕಡ್ಡಾಯವಾಗಿ ನೀಡಬೇಕೆಂದು ಆದೇಶಿಸಲಾಗಿದೆ.
2. ಗ್ರಾಹಕರ ಆವರಣದಲ್ಲಿ ಏರ್ ಕಂಡೀಶನರ್, ಫ್ಯಾನ್, ರೆಫ್ರಿಜರೇಟರ್ ಇತ್ಯಾದಿ ವಿದ್ಯುತ್ ಉಪಕರಣಗಳು ಬಿಇಇ 5 ಸ್ಟಾರ್ ರೇಟೆಡ್ (ಬಿಇಇ *****) ಇದ್ದಲ್ಲಿ ಮಾತ್ರ ಹೊಸ ಸಂಪರ್ಕ ನೀಡಲಾಗುವದು.
3. ಬೀದಿ ದೀಪಗಳಿಗೆ ಎಲ್‌ಇಡಿ ದೀಪ / ದಕ್ಷ ಇಂಧನ ದೀಪಗಳಾದ ಇಂಡಕ್ಷನ್ ಲ್ಯಾಂಪ್ ಅಳವಡಿಸುವುದು ಹಾಗೂ ಟೈಮರ್ ಸ್ವಿಚನ್ನು ಅಳವಡಿಸುವುದು ಕಡ್ಡಾಯವಾಗಿದೆ.

### ವಿದ್ಯುತ್ ಬಳಕೆಯಲ್ಲಿ ಉಳಿತಾಯ ಕ್ರಮಗಳು :

**1. ವಿದ್ಯುತ್ ದೀಪಗಳು :**



- ಅವಶ್ಯಕತೆ ಇದ್ದಾಗ ಮಾತ್ರ ವಿದ್ಯುತ್ ದೀಪಗಳನ್ನು ಬೆಳಗಿಸಿ / ಬಳಸಿ.
- ಸೂರ್ಯನ ಬೆಳಕು ಉಚಿತ ಹಾಗೂ ಹಗಲಿನಲ್ಲಿ ಅದರ ಗರಿಷ್ಠ ಬಳಕೆ ಮಾಡಿ, ಹಗಲಿನಲ್ಲಿ ಕೃತಕ ಬೆಳಕಿನ ಬಳಕೆ ತಪ್ಪಿಸಿ.
- ವಿದ್ಯುತ್ ದೀಪಗಳ ಮೇಲಿರುವ ಧೂಳನ್ನು ಒರೆಸಿ ಸ್ವಚ್ಛವಾಗಿಡಿ, ಇದರಿಂದ ಬೆಳಕು ಪ್ರಬಲವಾಗುತ್ತದೆ.
- ಅವಶ್ಯಕತೆ ಇದ್ದಲ್ಲಿ ಮಾತ್ರ ವಿದ್ಯುತ್ ದೀಪಗಳನ್ನು ಹೊತ್ತಿಸಿ, ಅವಶ್ಯಕತೆ ಇಲ್ಲದೆ ಕೊಠಡಿ ತುಂಬಾ ದೀಪಗಳನ್ನು ಬಳಸದಿರಿ.
- ಅಲಂಕಾರಿಕ ದೀಪಗಳನ್ನು ಮಧ್ಯರಾತ್ರಿಯ ಸಮಯದಲ್ಲಿ ಬಳಸದಿರಿ ಹಾಗೂ ಮೆಟ್ಟಿಲುಗಳ ಬಳಿ ಕಡಿಮೆ ವ್ಯಾಟೇಜ್ ಬಲ್ಬ್‌ಗಳನ್ನು ಬಳಸಿ.
- ಎಲ್.ಇ.ಡಿ. ಬಲ್ಬ್‌ಗಳನ್ನು ಸತತವಾಗಿ 25,000 ಗಂಟೆಗಳ ಕಾಲ ಬೆಳಕನ್ನು ನೀಡಲು ಬಳಸಬಹುದು.
- ಕಡಿಮೆ ವೊಲ್ಟೆಜ್ ಇದ್ದ ಪಕ್ಷದಲ್ಲೂ ಎಲ್.ಇ.ಡಿ ಬಲ್ಬಗಳು ಬೆಳಕನ್ನು ನೀಡುತ್ತವೆ.

**2. ಫ್ಯಾನ್ :**



- ಅವಶ್ಯಕತೆ ಇದ್ದಾಗ ಮಾತ್ರ ಫ್ಯಾನ್‌ಗಳನ್ನು ಬಳಸಿ.
- ಕನ್ವೆಷನಲ್ ರೆಗ್ಯುಲೇಟರ್‌ಗಳ ಬದಲಿಗೆ ಎಲೆಕ್ಟ್ರಾನಿಕ್ಸ್ ರೆಗ್ಯುಲೇಟರ್‌ಗಳನ್ನು ಬಳಸಿ.
- ಸಿಲಿಂಗ್ ಫ್ಯಾನ್‌ಗಿಂತ ಎತ್ತರದಲ್ಲಿ ಎಕ್ಸಾಸ್ಟ್ ಫ್ಯಾನ್‌ಗಳನ್ನು ಅಳವಡಿಸಿ.
- ಡೈರಿ, ಪೌಲ್ಟರಿ ಹಾಗೂ ಇತರೆ ಕಾರ್ಖಾನೆಗಳಲ್ಲಿ High Efficient ಎಕ್ಸಾಸ್ಟ್ ಫ್ಯಾನ್‌ಗಳನ್ನು ಬಳಸಿರಿ.

**3. ಎಲೆಕ್ಟ್ರಿಕ್ ಐರನ್ ಬಾಕ್ಸ್ (ಇಸ್ತ್ರಿಪೆಟ್ಟಿಗೆ) :**



- ಆಟೋಮೆಟಿಕ್ ಟೆಂಪರೇಚರ್ ಕಟ್‌ಆಫ್ ಇರುವ ಇಸ್ತ್ರಿಪೆಟ್ಟಿಗೆಯನ್ನು ಬಳಸಿ.
- ಒಣಗದ ಬಟ್ಟೆಗಳಿಗೆ ಇಸ್ತ್ರಿ ಮಾಡದಿರಿ.
- ಇಸ್ತ್ರಿ ಮಾಡುವಾಗ ಬಟ್ಟೆಗಳ ಮೇಲೆ ಹೆಚ್ಚು ನೀರನ್ನು ಚುಮಿಕಿಸದಿರಿ.

**4. ಅಡುಗೆ ಮನೆಯ ಉಪಕರಣಗಳು :**



- ಮಿಕ್ಸಿಗೆ ಒಣ ಪದಾರ್ಥಗಳನ್ನು ಹಾಕಿ ರುಬ್ಬದಿರಿ, ಯಾಕೆಂದರೆ ಅದು ಸವೆಯಲು ದೀರ್ಘ ಸಮಯ ತೆಗೆದುಕೊಳ್ಳುತ್ತದೆ.
- ಅವಶ್ಯಕತೆ ಮೀರಿ ಹೆಚ್ಚು ಪದಾರ್ಥಗಳನ್ನು ಓವೆನ್‌ನಲ್ಲಿ ಬೇಯಿಸದಿರಿ.
- ಅವಶ್ಯಕತೆ ಇಲ್ಲದೆ ಓವೆನ್‌ನನ್ನು Pre-heat ಮಾಡಬೇಡಿ.



- ಎಲೆಕ್ಟ್ರಿಕ್ ಕಾಯಿಲ್ ಬದಲಿಗೆ ಸ್ಟಾರ್‌ರೇಟೆಡ್ ಇಂಡಕ್ಷನ್ ಸ್ಟೌವ್‌ಗಳನ್ನು ಬಳಸಿ.
- ನೀರು ಕಾಯಿಸಲು ಇಂಡಕ್ಷನ್ ಸ್ಟೌವ್ ಬಳಸುವುದರಿಂದ ನಿಮ್ಮ ವಿದ್ಯುತ್ ಬಳಕೆಯನ್ನು ಶೇಕಡಾ 50% ಕಡಿಮೆಗೊಳಿಸುತ್ತದೆ.
- ಎಲೆಕ್ಟ್ರಿಕ್ ಸ್ಟೌವ್ ಬಳಸುತ್ತಿದ್ದಲ್ಲಿ, ಸೆಟ್ ಮಾಡಿದ ಸಮಯಕ್ಕೂ ಸ್ವಲ್ಪ ಮುಂಚಿತವಾಗಿ ಆಫ್ ಮಾಡಿ.
- ಎಲೆಕ್ಟ್ರಿಕ್ ಸ್ಟೌವ್‌ಗಳಲ್ಲಿ ಅಡುಗೆ ಮಾಡಲು ಯಾವಾಗಲೂ ಸಮ ತಳವಿರುವ ಪಾತ್ರೆಗಳನ್ನೆ ಬಳಸಿ.

**5. ರೆಫ್ರಿಜರೇಟರ್ :**



- ಅವಶ್ಯಕತೆ ಇಲ್ಲದೆ ರೆಫ್ರಿಜರೇಟರ್ ಡೋರ್‌ಅನ್ನು ಆಗಾಗ ತೆಗೆಯದಿರಿ.
- ರೆಫ್ರಿಜರೇಟರ್ ಡೋರ್ ಸರಿಯಾಗಿ ಹಾಕಿದೆಯೇ ಎಂದು ಪರಿಶೀಲಿಸಿ.
- ರೆಫ್ರಿಜರೇಟರ್ ಮತ್ತು ಫ್ರೀಜರ್‌ಅನ್ನು ಅತಿ Cold positionನಲ್ಲಿ ಇಡದಿರಿ.
- ಬಿಸಿ ಇರುವ ತಿಂಡಿ ಪದಾರ್ಥಗಳನ್ನು ರೆಫ್ರಿಜರೇಟರ್ ಒಳಗೆ ಇಡದಿರಿ.

**6. ವಾಷಿಂಗ್ ಮೆಷಿನ್ :**



- ಕಡಿಮೆ ಬಟ್ಟೆಗಳನ್ನು ಒಗೆಯಲು ವಾಷಿಂಗ್ ಮೆಷಿನ್‌ನನ್ನು ಬಳಸದಿರಿ.
- ಮೆಷಿನ್‌ನಲ್ಲಿ ಅಗತ್ಯಕ್ಕೆ ತಕ್ಕಂತೆ ನೀರು ಬಳಸಿ ಬಟ್ಟೆ ಒಗೆಯಿರಿ.
- ಮೆಷಿನ್‌ನಲ್ಲಿನ 'ಟೈಮರ್' ಆಪ್ಷ್ಯನ್‌ಅನ್ನು ಬಳಸುವುದರಿಂದ "Off-Peak" ಸಮಯದಲ್ಲಿ ಬಟ್ಟೆ ಒಗೆಯಬಹುದಾಗಿರುತ್ತದೆ ಮತ್ತು ಇದರಿಂದ ವಿದ್ಯುತ್ ಉಳಿತಾಯವಾಗುತ್ತದೆ.
- ಬಟ್ಟೆಗಳನ್ನು ಮೆಷಿನ್‌ನಲ್ಲಿ ಒಣಗಿಸುವುದರ ಬದಲಿಗೆ ನೈಸರ್ಗಿಕ ಸೂರ್ಯನ ಬಿಸಿಲಿನಲ್ಲಿ ಒಣಗಿಸಿ.
- ಅವಶ್ಯಕತೆ ಇದ್ದಲ್ಲಿ ಮಾತ್ರ ಮೆಷಿನ್‌ನಿಂದ ಬಟ್ಟೆಯನ್ನು ಒಣಗಿಸಿ.

**7. ಎಲೆಕ್ಟ್ರಾನಿಕ್ ಉಪಕರಣಗಳು :**



- ಬಳಸದಿರುವ ಸಮಯದಲ್ಲಿ ಟಿ.ವಿ, ರೇಡಿಯೋ, ಆಡಿಯೋ ಯಂತ್ರಗಳನ್ನು ಐಡಲ್ ಮೋಡ್‌ನಲ್ಲಿ ಇಡದಿರಿ ಮತ್ತು ಪ್ಲಗ್‌ಗಳಿಂದ ತೆಗೆದಿರಿಸಿ ಯಾಕೆಂದರೆ Idle ಯಂತ್ರಗಳಿಂದಲೂ ಕೂಡ ವಿದ್ಯುತ್ ಬಳಕೆ ಮತ್ತು ಪೋಲು ಆಗುತ್ತಿರುತ್ತದೆ.

**8. ಕಂಪ್ಯೂಟರ್‌ಗಳು (ಗಣಕ ಯಂತ್ರಗಳು) :**



- ಅವಶ್ಯಕತೆಯಿಲ್ಲದಿರುವಾಗ ಆಫೀಸ್ ಮತ್ತು ಮನೆಗಳಲ್ಲಿನ ಗಣಕ ಯಂತ್ರಗಳನ್ನು off ಮಾಡಿರಿ.
- ಮಾನಿಟರ್‌ನ ತೀಕ್ಷ್ಣತೆಯನ್ನು ಕಡಿಮೆ ಇರಿಸಿ. ಹೆಚ್ಚು ತೀಕ್ಷ್ಣತೆಯು ಹೆಚ್ಚು ವಿದ್ಯುತ್‌ನ್ನು ಬಳಸುತ್ತದೆ.

**9. ಹವಾನಿಯಂತ್ರಣಗಳು (Air Conditioners) :**



- ಉಷ್ಣತೆಗೆ ತಕ್ಕಂತೆ ಆಟೋಮೆಟಿಕ್ Cut off ಆಗುವ ಹವಾನಿಯಂತ್ರಣಗಳನ್ನು ಬಳಸಿ.
- "Low Cool" ಅಥವಾ "Energy efficient" ಮೋಡ್‌ಗಳಲ್ಲಿ ಹವಾ ನಿಯಂತ್ರಣಗಳನ್ನು ಬಳಸಿ.
- ಹವಾನಿಯಂತ್ರಣಗಳ್ನು ಅಳವಡಿಸಿರುವ ಕೊಠಡಿಗಳು ಪೂರ್ತಿಯಾಗಿ ಬಂದಿಯಾಗಿರುವಂತೆ ಎಚ್ಚರವಹಿಸಿ.

ಹೆಚ್ಚು ಸ್ಟಾರ್ ಹೆಚ್ಚು ಉಳಿತಾಯ
ಬಿಇಇ 5 ಸ್ಟಾರ್‌ಗಳುಳ್ಳ ವಿದ್ಯುತ್ ಉಪಕರಣಗಳನ್ನು ಬಳಸಿ

ಎಲ್.ಇ.ಡಿ. ಬಳಸಿ ದಕ್ಷ ವಿದ್ಯುತ್ ಬಳಕೆದಾರರಾಗಿ

24/7 ಸಹಾಯವಾಣಿ 1912

**ವಿದ್ಯುಚ್ಛಕ್ತಿ ಉಳಿತಾಯ ತುಂಬ ಸರಳ, ವಿದ್ಯುತ್ ಅಮೂಲ್ಯವಾದದು. ವಿವೇಚನೆಯಿಂದ ಬಳಸಿರಿ.**

ವಿದ್ಯುತ್ ಕಳ್ಳತನಕ್ಕೆ ಕಠಿಣ ಶಿಕ್ಷೆ, ವಿದ್ಯುಚ್ಛಕ್ತಿ ಕಳ್ಳತನವನ್ನು ತಡೆಗಟ್ಟಲು ಹೆಸ್ಕಾಂನೊಂದಿಗೆ ಸಹಕರಿಸಿ, ವಿದ್ಯುತ್ ಬಿಲ್‌ನ ಬಾಕಿ (Arrears) ಹಣ ತುಂಬಿ ವಿದ್ಯುತ್ ಕಡಿತಗೊಳಿಸುವುದನ್ನು ತಪ್ಪಿಸಿ.

**ಸಾರ್ವಜನಿಕ ಆಸ್ತಿ–ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.**